# ನಿವೇದನೆ

## ಬೋರ್ಡುಗಳಲ್ಲಿನ ಅಕ್ಷರಗಳಲ್ಲಿ ಕನ್ನಡವಿದ್ದರೆ ಸಾಕೆ?

> ರಾಜ್ಯದಲ್ಲಿರುವ ಅಂಗಡಿ, ಆಸ್ಪತ್ರೆ, ಹೋಟೆಲ್ ಹಾಗೂ ವ್ಯಾಪಾರಿ ಮಳಿಗೆಗಳ ನಾಮಫಲಕಗಳಲ್ಲಿಯಷ್ಟೇ ಕನ್ನಡ ಹಿನ್ನಡೆ ಅನುಭವಿಸಿಲ್ಲ. ಅನೇಕ ಖಾಸಗಿ ಸಂಸ್ಥೆಗಳ ಒಳಗೂ ಕನ್ನಡ ಕ್ಷೀಣಗೊಂಡಿರುವ ಸಂದರ್ಭದಲ್ಲಿ, ಕನ್ನಡಕ್ಕಾಗಿ ಧ್ವನಿ ಎತ್ತುವುದು ಅಗತ್ಯವಷ್ಟೇ ಅಲ್ಲ, ಅನಿವಾರ್ಯ ಕೂಡ.

ಬೆಂಗಳೂರು ಮಹಾನಗರದ ಕೆಲವು ಭಾಗಗಳಲ್ಲಿ, ಕನ್ನಡೇತರ ಭಾಷೆಗಳಲ್ಲಿರುವ ಇಂಗ್ಲಿಷ್ ನಾಮಫಲಕಗಳನ್ನು 'ಕರ್ನಾಟಕ ರಕ್ಷಣಾ ವೇದಿಕೆ'ಯ ಕಾರ್ಯಕರ್ತರು ಕಿತ್ತೆಸೆದಿರುವುದು ಹಾಗೂ 'ನಾಮಫಲಕ ಜಾಗೃತಿ ಆಂದೋಲನ' ಹಮ್ಮಿಕೊಂಡಿದ್ದುದು ಸಹಜವಾಗಿಯೇ ದೊಡ್ಡ ಸುದ್ದಿಯಾಗಿದೆ. ನಾಮಫಲಕಗಳಲ್ಲಿ ಶೇ. 60ರಷ್ಟು ಕನ್ನಡ ಬಳಕೆ ಮಾಡಬೇಕೆಂದು ಬಿಬಿಎಂಪಿ ನಿರ್ದೇಶನ ಹೊರಡಿಸಿದೆ. ಅದರ ಕಡ್ಡಾಯ ಅನುಷ್ಠಾನಕ್ಕೆ ಕನ್ನಡ ಚಳವಳಿಕಾರರು ಒತ್ತಾಯಿಸುತ್ತಿದ್ದಾರೆ. ನಾಮಫಲಕಗಳಲ್ಲಿ ಕನ್ನಡ ಕಡ್ಡಾಯಗೊಳಿಸಲು 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯ್ದೆ' ತಿದ್ದುಪಡಿಗೆ ಸುಗ್ರೀವಾಜ್ಞೆ ಹೊರಡಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಈ ಎಲ್ಲ ಬೆಳವಣಿಗೆಗಳು ಸ್ವಾಗತಾರ್ಹ.

ಬೆಂಗಳೂರಿನ ಕೆಲವು ಭಾಗಗಳಲ್ಲಿನ ಭಾಷಾ ಪರಿಸರ ಕನ್ನಡಿಗರು ಕನ್ನಡನಾಡಿನಲ್ಲೇ 'ಅನ್ಯ' ಎನ್ನುವ ಭಾವನೆ ಉಂಟುಮಾಡುವಂತಿದೆ. ಬೆಂಗಳೂರು ಈಗ ಅಂತರರಾಷ್ಟ್ರೀಯ ಮಾನ್ಯತೆ ಪಡೆದಿರುವ ನಗರ. ಇದರಿಂದಾಗಿ ಬೆಂಗಳೂರು ಇಂಗ್ಲಿಷ್‌ಮಯವಾಗಬೇಕಿಲ್ಲ, ತನ್ನ ಅಸ್ಮಿತೆಯನ್ನು ಬಿಟ್ಟುಕೊಡಬೇಕಾಗಿಲ್ಲ. ತಮ್ಮ ತಮ್ಮ ನೆಲದ ನುಡಿಗಳನ್ನು ಉಸಿರಾಡುವ ಮೂಲಕವೇ ಅಂತರರಾಷ್ಟ್ರೀಯ ಮನ್ನಣೆ ಪಡೆದಿರುವ ಅನೇಕ ವಿಶ್ವಖ್ಯಾತಿಯ ನಗರಗಳಿವೆ. ಫ್ರೆಂಚರು, ಜರ್ಮನ್ನರು, ಜಪಾನೀಯರು ಹಾಗೂ ಚೀನೀಯರ ಭಾಷಾಪ್ರೇಮವನ್ನು ಅವರ ಅನನ್ಯತೆಯೆಂದು ಜಗತ್ತು ಭಾವಿಸಿದೆಯೇ ಹೊರತು, ದೇಸಿಭಾಷೆಗಳಿಂದಾಗಿ ಆ ದೇಶಗಳು ಸಂಕುಚಿತಗೊಂಡಿವೆ ಎಂದು ಯಾರೂ ತಿಳಿದಿಲ್ಲ. ಆ ಭಾಷಾಮಾದರಿ ಕನ್ನಡಿಗರಿಗೆ ಅನುಕರಣೀಯ.

ರಾಜ್ಯದಲ್ಲಿರುವ ಅಂಗಡಿ, ಆಸ್ಪತ್ರೆ, ಹೋಟೆಲ್ ಹಾಗೂ ವ್ಯಾಪಾರಿ ಮಳಿಗೆಗಳ ನಾಮಫಲಕಗಳಲ್ಲಿಯಷ್ಟೇ ಕನ್ನಡ ಹಿನ್ನಡೆ ಅನುಭವಿಸಿಲ್ಲ. ಬಹುತೇಕ ಸಂಸ್ಥೆಗಳ ಒಳಗೂ ಕನ್ನಡಕ್ಕೆ ಆದ್ಯತೆ ದೊರೆತಿರುವುದು ಅಷ್ಟಕ್ಕಷ್ಟೇ. ಬ್ಯಾಂಕುಗಳನ್ನು ಒಳಹೊಕ್ಕು ನೋಡಿದರೆ ಕನ್ನಡದ ದುರವಸ್ಥೆ ಅರ್ಥವಾಗುತ್ತದೆ. ಕನ್ನಡವಷ್ಟೇ ಬಲ್ಲ ಜನಸಾಮಾನ್ಯರು ಬ್ಯಾಂಕುಗಳಲ್ಲಿ ಅನುಭವಿಸುವ ಮುಜುಗರ, ತೊಂದರೆ ಅಷ್ಟಿಷ್ಟಲ್ಲ. ಗ್ರಾಹಕರ ನೆಲದ ಭಾಷೆಯನ್ನು ಕಲಿಯಬೇಕೆನ್ನುವ ಉತ್ಸಾಹ ಹಾಗೂ ಉಮೇದು ಬ್ಯಾಂಕುಗಳ ನೌಕರರಲ್ಲಿ ಕಾಣಿಸುತ್ತಿಲ್ಲ. ಪರ ರಾಜ್ಯಗಳಿಂದ ಬಂದಿರುವ ನೌಕರರು ಹಿಂದಿ ಮತ್ತು ಇಂಗ್ಲಿಷನ್ನು ಅಧಿಕಾರ ಮತ್ತು ದರ್ಪದ ಭಾಷೆಯನ್ನಾಗಿ ಇಲ್ಲಿನ ಜನರ ಮೇಲೆ ಹೇರಲು ಬಯಸುತ್ತಾರೆ. ಅದಕ್ಕೆ ತಕ್ಕಹಾಗೆ, ಬಹುತೇಕ ಬ್ಯಾಂಕಿಂಗ್ ಸೇವೆಗಳು ಇಂಗ್ಲಿಷ್ ಹಾಗೂ ಹಿಂದಿಯಲ್ಲಿವೆ.

ಬಹುರಾಷ್ಟ್ರೀಯ ಕಂಪನಿಗಳ ವಹಿವಾಟಿನಲ್ಲೂ ಇಂಗ್ಲಿಷ್ ಹಾಗೂ ಹಿಂದಿಗೆ ಆದ್ಯತೆ. ಗ್ರಾಹಕ ಸೇವಾಕೇಂದ್ರಗಳಿಗೆ ಕರೆ ಮಾಡಿದರೆ, ಕನ್ನಡದಲ್ಲಿ ಉತ್ತರ ನೀಡುವವರಿಗೆ ಹುಡುಕಾಟ ನಡೆಸಬೇಕು. ಖಾಸಗಿ ಸಂಸ್ಥೆಗಳ ಒಳಗೂ ಹೊರಗೂ ಕನ್ನಡ ಕ್ಷೀಣಗೊಂಡಿರುವ ಸಂದರ್ಭದಲ್ಲಿ, ಕನ್ನಡಕ್ಕಾಗಿ ಧ್ವನಿ ಎತ್ತುವುದು ಅಗತ್ಯವಷ್ಟೇ ಅಲ್ಲ, ಅನಿವಾರ್ಯ ಕೂಡ.

ಕನ್ನಡದ ನಿರ್ಲಕ್ಷ್ಯದಂತೆಯೇ ತಪ್ಪು ಕನ್ನಡ ಬಳಕೆಯೂ ನಮಗೆ ಆತಂಕ ಹುಟ್ಟಿಸಬೇಕು. ಅಂಗಡಿ ಮುಂಗಟ್ಟುಗಳ ಹಾಗೂ ಸಾರ್ವಜನಿಕ ವಲಯದ ಸಂಸ್ಥೆಗಳ ಪ್ರಕಟಣೆಗಳಲ್ಲಿನ ಕನ್ನಡ ಭಾಷೆಯ ಬಳಕೆ ಗಾಬರಿಹುಟ್ಟಿಸುವಂತಿದೆ. ಕಾಗುಣಿತದ ತಪ್ಪುಗಳು ಕಣ್ಣಿಗೆ ರಾಚುವಂತಿವೆ. 'ಗೂಗಲ್ ಟ್ರಾನ್ಸ್‌ಲೇಟರ್' ಬಳಸಿ ಮಾಡಿರುವ ಅಧ್ವಾನದ ಅನುವಾದಗಳು ವ್ಯಾಪಕವಾಗಿ ಬಳಕೆಯಲ್ಲಿವೆ. ಈ ತಪ್ಪು ಕನ್ನಡವನ್ನು ಸರಿಪಡಿಸುವವರು ಯಾರು? ಸಿನಿಮಾಗಳಲ್ಲಿನ ಟೈಟಲ್ ಕಾರ್ಡ್‌ಗಳನ್ನು ಗಮನಿಸಿ. ಕಾಗುಣಿತ ದೋಷಗಳಿಂದ ಮುಕ್ತವಾದ ಸಿನಿಮಾದ ಟೈಟಲ್ ಕಾರ್ಡ್‌ಗಳು ಇಲ್ಲವೇ ಇಲ್ಲವೆನ್ನುವಷ್ಟು ಅಪರೂಪ. ಇತ್ತೀಚಿನ ದಿನಗಳಲ್ಲಂತೂ ಹಲವು ಕನ್ನಡ ಸಿನಿಮಾಗಳ ಟೈಟಲ್ ಕಾರ್ಡ್‌ಗಳು ಇಂಗ್ಲಿಷಿನಲ್ಲಿರುತ್ತವೆ. ಕನ್ನಡ ಪರಿಸರ ಹಾಗೂ ಕನ್ನಡಪ್ರಜ್ಞೆಯ ಬಗ್ಗೆ ಅರಿವಿಲ್ಲದಿರುವ ಸಮಕಾಲೀನ ಕನ್ನಡ ಸಿನಿಮಾ ನಿರ್ಮಾತೃಗಳು ಈಗ ಕನ್ನಡ ಅಕ್ಷರಗಳ ಬಳಕೆಯಿಂದಲೂ ದೂರವಾಗುತ್ತಿದ್ದಾರೆ. ಇಂಥ ಸಿನಿಮಾಗಳು ಕನ್ನಡದ ಹೆಸರಿನಲ್ಲಿ ಸರ್ಕಾರದಿಂದ ಸಹಾಯಧನ ಪಡೆಯುತ್ತವೆ. ಕನ್ನಡದಲ್ಲಿ ಟೈಟಲ್ ಕಾರ್ಡ್ ಇಲ್ಲದ ಸಿನಿಮಾಗಳನ್ನು ಸರ್ಕಾರ ತನ್ನ ಸಹಾಯಧನ ಸೌಲಭ್ಯದಿಂದ ದೂರವಿಡುವುದು ಅಗತ್ಯ.

ಪ್ರತಿ ಸಂಸ್ಥೆಯೂ ತನ್ನ ಪ್ರಕಟಣೆಗಳಲ್ಲಿನ ಕನ್ನಡದ ಬಳಕೆ ದೋಷಮುಕ್ತವಾಗಿರುವಂತೆ ನೋಡಿಕೊಳ್ಳಲು ಅಧಿಕಾರಿಯೊಬ್ಬರನ್ನು ನೇಮಿಸಿಕೊಳ್ಳುವಂತೆ ಸರ್ಕಾರ ಕಾನೂನು ರೂಪಿಸುವುದು ಉತ್ತಮ. ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದವರಿಗೆ ಈ ಹುದ್ದೆಗಳನ್ನು ಮೀಸಲಾಗಿಡಬಹುದು. ಇದರಿಂದಾಗಿ ಕನ್ನಡ ಎಂ.ಎ. ಪದವೀಧರರಿಗೆ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಿ, ವಿಶ್ವವಿದ್ಯಾಲಯಗಳಲ್ಲಿನ ಕನ್ನಡ ಸ್ನಾತಕೋತ್ತರ ಕೇಂದ್ರಗಳಲ್ಲಿನ ಸೂತಕದ ಛಾಯೆ ಕೊಂಚ ಮಟ್ಟಿಗಾದರೂ ಪರಿಹಾರವಾಗಬಹುದು.

ಕರ್ನಾಟಕದಲ್ಲಿ ಕನ್ನಡದ ಅನುಷ್ಠಾನ ಮಾಡಬೇಕಿರುವುದು ಸರ್ಕಾರದ ಕರ್ತವ್ಯ. ಆ ಹೊಣೆಗಾರಿಕೆಯನ್ನು ವೇದಿಕೆಯೊಂದರ ಕಾರ್ಯಕರ್ತರು ಮಾಡಬೇಕಿರುವ ಸ್ಥಿತಿ ಸೃಷ್ಟಿಸಿರುವುದು ಸರ್ಕಾರಕ್ಕೆ ನಾಚಿಕೆ ಉಂಟುಮಾಡಬೇಕಾದ ಸಂಗತಿ. ಕನ್ನಡನಾಡಿಗೆ ಕರ್ನಾಟಕವೆಂದು ನಾಮಕರಣವಾದ ಚಾರಿತ್ರಿಕ ಘಟನೆಗೆ ಐವತ್ತು ವರ್ಷಗಳು ತುಂಬಿರುವ ಸಂದರ್ಭದಲ್ಲಾದರೂ ಕನ್ನಡ ಜಾಗೃತಿ ಚಿಂತನೆ ಸಾರ್ವಜನಿಕ ಹಾಗೂ ಸರ್ಕಾರಿ ವಲಯಗಳಲ್ಲಿ ನಡೆಯಲಿ.

■ **ರಘುನಾಥ ಚ.ಹ.**




ಈಶ್ವರ್